

# सरयू ಸರಯೂ
## ವಿದ್ಯಾಕೇಂದ್ರ ವಾರ್ತಾಪತ್ರ

ಸಂಪುಟ–2 ಸಂಚಿಕೆ 8 5114/ನಂದನ ಸಂ। ನಿಜ ಭಾದ್ರಪದ/ಅಕ್ಟೋಬರ್ 2012 ಪುಟಗಳು : 8

# ರಾಷ್ಟ್ರೀಯ ಭದ್ರತೆಗಿರುವ ಸವಾಲುಗಳು–ವಿಚಾರಸಂಕಿರಣ

ದಿನಾಂಕ 06.09.2012 ಶ್ರೀರಾಮ ವಿದ್ಯಾಕೇಂದ್ರದ ಪದವಿ ವಿಭಾಗದ ವತಿಯಿಂದ "ರಾಷ್ಟ್ರೀಯ ಭದ್ರತೆಗಿರುವ ಸವಾಲುಗಳು–ಉತ್ತರ" ಎಂಬ ವಿಷಯದ ಕುರಿತು ಮಂಗಳೂರು ವಿಶ್ವವಿದ್ಯಾನಿಲಯ ಮಟ್ಟದ ವಿಚಾರ ಸಂಕಿರಣ ನಡೆಯಿತು.



ತುಮಕೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಎಸ್.ಸಿ.ಶರ್ಮಾ ಇವರು ವಿಚಾರ ಸಂಕಿರಣವನ್ನು ಉದ್ಘಾಟಿಸಿ "ತ್ಯಾಗ ಬಲಿದಾನದಿಂದ ನಿರ್ಮಾಣವಾಗಿರುವ ರಾಷ್ಟ್ರವನ್ನು ಜಾಗತೀಕರಣದ ಹೆಸರಿನಲ್ಲಿ ದುರ್ಬಲಗೊಳಿಸುವ ಷಡ್ಯಂತ್ರ ಎಗ್ಗಿಲ್ಲದೆ ನಡೆಯುತ್ತಿದೆ. ಮತಾಂತರ, ಭಯೋತ್ಪಾದನೆ, ನುಸುಳುಕೋರರು ಹಾಗೂ ಪರಮಾಣು ಬೆದರಿಕೆಗಳು ದೇಶಕ್ಕೆ ಗಂಡಾಂತರ ತಂದೊಡ್ಡಿವೆ. ಈ ಸಮಸ್ಯೆಗಳನ್ನು ಎದುರಿಸಲು ವಿದ್ಯಾರ್ಥಿಗಳಲ್ಲಿ ದೇಶಭಕ್ತಿಯನ್ನು ಜಾಗೃತಗೊಳಿಸುವುದು ಅಗತ್ಯ" ಎಂದರು. ವೇದಿಕೆಯಲ್ಲಿ ಅಧ್ಯಕ್ಷ ಶ್ರೀ ನಾರಾಯಣ ಸೋಮಯಾಜಿ, ಉಪಸ್ಥಿತರಿದ್ದರು. ಪ್ರಾಚಾರ್ಯ ಶ್ರೀ ಕೃಷ್ಣಪ್ರಸಾದ ಸ್ವಾಗತಿಸಿ, ಶ್ರೀಮತಿ ಕಾತ್ಯಾಯನಿ ವಂದನಾರ್ಪಣೆಗೈದು ಶ್ರೀಮತಿ ವಿಜಯಲಕ್ಷ್ಮಿ ನಿರೂಪಿಸಿದರು.



## ಪ್ರಸ್ತಾವನೆ

**ಡಾ। ಪ್ರಭಾಕರ ಭಟ್**
ಸಂಚಾಲಕರು, ಶ್ರೀರಾಮ ವಿದ್ಯಾಕೇಂದ್ರ
ಕ್ಷೇತ್ರೀಯ ಸಂಪರ್ಕ ಪ್ರಮುಖ್, ರಾ.ಸ್ವ.ಸಂ.

"ಜಗತ್ತಿನ ಅತ್ಯಂತ ಪುರಾತನ, ನಿತ್ಯನೂತನ, ದೇಶ ನಮ್ಮದು. ಉಳಿದ ದೇಶವಾಸಿಗಳು ಅವರ ದೇಶವನ್ನು ಪ್ರೀತಿಸಿದರೆ ನಾವು ನಮ್ಮ ದೇಶವನ್ನು ಆರಾಧಿಸುತ್ತೇವೆ. ಆದರೂ ನಮ್ಮ ಮೈಮರೆವಿನ ಕಾರಣದಿಂದ ಶ್ರೇಷ್ಠ ಮಹಾಪುರುಷರಿಗೆ ಜನ್ಮ ನೀಡಿದ ಭೂಮಿಯನ್ನೇ ಕಳಕೊಂಡೆವು. ಜಗತ್ತಿನ ಹಿತವೇ ಭಾರತದ ಹಿತ ಎಂಬುದು ಭಾರತೀಯರ ಪರಂಪರೆ. ಇಂದು ಯುವಜನತೆ ಕೇವಲ ಉದ್ಯೋಗ ಸ್ವಭವಿಷ್ಯ ಮಾತ್ರವಲ್ಲದೆ ರಾಷ್ಟ್ರೀಯ ವಿಚಾರಗಳನ್ನು ಮೈಗೂಡಿಸಿ ಸವಾಲುಗಳನ್ನು ಎದುರಿಸುವ ಶಕ್ತಿಯನ್ನು ಬೆಳೆಸಿಕೊಳ್ಳಬೇಕಾಗಿದೆ. ಹಾಗೂ ಆ ಬಗ್ಗೆ ಕ್ರಿಯಾಶೀಲರಾಗಬೇಕಾಗಿದೆ. ಅದಕ್ಕಾಗಿ ಈ ವಿಚಾರ ಸಂಕಿರಣ".



## ಗೋಷ್ಠಿ–1

**ಶ್ರೀ ವಿ. ನಾಗರಾಜ್**
ಕ್ಷೇತ್ರೀಯ ಬೌದ್ಧಿಕ್ ಪ್ರಮುಖ್, ರಾ.ಸ್ವ.ಸಂ.
ಕಾರ್ಯದರ್ಶಿ, ಮಿಥಿಕ್ ಸೊಸೈಟಿ ಬೆಂಗಳೂರು

ವಿಷಯ: ಜಮ್ಮು ಕಾಶ್ಮೀರ ಬಗೆಹರಿಯದ ಸಮಸ್ಯೆಯೇ?

"ಪಾಕ್ ಆಕ್ರಮಿತ ಕಾಶ್ಮೀರವನ್ನು ಮರಳಿ ಪಡೆಯಲು ಅವಕಾಶವಿದ್ದರೂ ಕೇಂದ್ರಸರಕಾರ ಉದ್ದೇಶಪೂರ್ವಕ ಅವಕಾಶವನ್ನು ಬಳಸಿಲ್ಲ, ವೋಟ್ ಬ್ಯಾಂಕ್ ರಾಜಕೀಯದಿಂದ ದೇಶದ ಅಖಂಡತೆಗೆ ಧಕ್ಕೆಯಾಗಿದೆ. ಭಾರತದ ಅವಿಭಾಜ್ಯ ಅಂಗವಾಗಿರುವ ಜಮ್ಮು ಕಾಶ್ಮೀರಕ್ಕೆ 370ನೇ ವಿಧಿಯ ಮೂಲಕ ವಿಶೇಷ ಸ್ಥಾನಮಾನ ಆದರೆ ಅಲ್ಲಿರುವ ಅಲ್ಪಸಂಖ್ಯಾತ ಕಾಶ್ಮೀರಿ ಪಂಡಿತರಿಗೆ ಯಾವ ರಕ್ಷಣೆಯೂ ಇಲ್ಲವಾದದ್ದು ಘೋರ ಅನ್ಯಾಯ. ಜಮ್ಮುಕಾಶ್ಮೀರದ ನೈಜ ಸಮಸ್ಯೆಯನ್ನು ಸಂಪೂರ್ಣ ಮರೆಮಾಚಲಾಗಿದೆ. ಸರ್ಕಾರ ಇದಕ್ಕೆ ಪರಿಹಾರ ಕಂಡುಕೊಳ್ಳುವ ಸ್ಥಿತಿಯಲ್ಲಿಲ್ಲ. ದೇಶದ ಸಮಸ್ತ ಜನತೆಯೇ ಜಮ್ಮು ಕಾಶ್ಮೀರದ ರಕ್ಷಣೆಗೆ ಸಿದ್ಧರಾಗಬೇಕಾದುದು ಇಂದಿನ ಅನಿವಾರ್ಯತೆ."



## ಗೋಷ್ಠಿ–2

**ಶ್ರೀ ಸಂತೋಷ್**
ಪ್ರಾಂತ ಸಂಘಟನಾ ಕಾರ್ಯದರ್ಶಿ
ಭಾಜಪ, ಕರ್ನಾಟಕ

ವಿಷಯ : ಭಾರತದ ಗಡಿಯಂಚು ಚೀನಾದ ಸಂಚು

"ಸಾವಿರಾರು ಸವಾಲುಗಳ ನಡುವೆಯೂ, ಭಾರತ ಒಂದು ದೇಶ, ರಾಷ್ಟ್ರವಾಗಿ ಉಳಿದುಕೊಂಡಿದೆ. ಭಾರತಕ್ಕೆ ಯಾವುದೇ ರೀತಿಯಿಂದಲೂ ಪಾಕಿಸ್ತಾನ ಸವಾಲಾಗಲಾರದು. ಆದರೆ ಚೀನಾ ನಿಧಾನವಾಗಿ ಎಲ್ಲಾ ಕ್ಷೇತ್ರಗಳಲ್ಲಿ ತನ್ನ ಹಿಡಿತವನ್ನು ಸಾಧಿಸುತ್ತಿದೆ. ಮಿಲಿಟರಿ ಶಕ್ತಿಯನ್ನೂ ವೃದ್ಧಿಸಿಕೊಂಡು ನಮ್ಮ ದೇಶದ ಭೂಭಾಗವನ್ನು ಆಕ್ರಮಿಸಿ ಪಕ್ಕದ ಪಾಕಿಸ್ತಾನಕ್ಕೆ ಸಹಾಯ ಹಸ್ತ ಚಾಚಿ ಭಾರತದ ಗಡಿಯಂಚಿನಲ್ಲಿ ತನ್ನ ಸಂಚು ರೂಪಿಸಿದೆ.

ಭಾರತ ಎಂದಿಗೂ ಈ ಬಗ್ಗೆ ಮೃದುಧೋರಣೆ ತಳೆಯುವಂತಿಲ್ಲ. ಸ್ವಾಭಿಮಾನಿ ಜಾಗೃತ ಭಾರತ ಮಾತ್ರ ಚೀನಾದ ಈ ಸವಾಲನ್ನು ಎದುರಿಸಬಲ್ಲದು. ಅದಕ್ಕಾಗಿ ನಾವು ಬಲಿಷ್ಠರಾಗಬೇಕಾಗಿದೆ."

## ಗೋಷ್ಠಿ 3: ಸಮಾರೋಪ ಉಪನ್ಯಾಸ : ಶ್ರೀ ವಿ ನಾಗರಾಜ

ಸಮಾರೋಪದಲ್ಲಿ ಪ್ರತಿನಿಧಿಗಳ ಪ್ರಶ್ನೆಗಳಿಗೆ ಉತ್ತರಿಸುತ್ತಾ ಸೈನಿಕ ದೃಷ್ಟಿಯಲ್ಲಿ ನೋಡಿದಾಗ, ನಮ್ಮ ದೇಶ ಮೂರನೇ ಸ್ಥಾನದಲ್ಲಿದೆ. ಜಗತ್ತಿನಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವ ಆರ್ಥಿಕ ಶಕ್ತಿ ನಮ್ಮದು. ಇಚ್ಛಾಶಕ್ತಿ ಇದ್ದರೆ, ಚೀನಾ, ಪಾಕಿಸ್ತಾನದಂತಹ ಸಮಸ್ಯೆಗಳು ನಮಗೆ ಸವಾಲಲ್ಲ ಈ ಬಗ್ಗೆ ಯುವ ಜನಾಂಗದಲ್ಲಿ ಜಾಗೃತಿ ಮೂಡಿಸಿದರೆ, ಭವ್ಯಭಾರತ ನಿರ್ಮಾಣ ಸಾಧ್ಯ ಎಂದರು. ಒಟ್ಟು 58 ವಿದ್ಯಾಸಂಸ್ಥೆಗಳಿಂದ 395 ವಿದ್ಯಾರ್ಥಿಗಳು 138 ಶಿಕ್ಷಕರು, ಇತರ 60 ಹೀಗೆ ಒಟ್ಟು 593 ಜನ ಭಾಗವಹಿಸಿದ್ದರು. ಶಕೀಲಾ ಸ್ವಾಗತಿಸಿ, ಶ್ರೀ ವಸಂತ ಬಲ್ಲಾಳ್, ಸುಜಾತಾ ವಂದಿಸಿದರು.

ವಂದೇ ಮಾತರಂ ಮೂಲಕ ವಿಚಾರ ಸಂಕಿರಣ ಸಮಾಪನಗೊಂಡಿತು.

**ಶ್ರೀರಾಮ ವಿದ್ಯಾಕೇಂದ್ರ ಟ್ರಸ್ಟ್ (ರಿ.)**
ಹನುಮಾನ್ ನಗರ, ಕಲ್ಲಡ್ಕ, ಬಂಟ್ವಾಳ ತಾಲೂಕು, ದ.ಕ. 574 222. ದೂ. : 08255-275183
Email: info@srvk.org website: www.srvk.org Fax: 08255-275183

## ಚಿಂತನರಶ್ಮಿ

# ಶುದ್ಧ ವಸ್ತುವಿಗೆ ಶುದ್ಧ ಪಾತ್ರೆ ಬೇಕು

ಒಂದು ಸಣ್ಣ ಊರು. ಬಹಳಷ್ಟು ಜನ ಕೃಷಿಕರಾಗಿದ್ದವರು. ಶಾಂತಿಯಿಂದ, ಸೌಹಾರ್ದದಿಂದ ಬದುಕಿದ್ದವರು ಎಲ್ಲ ಜನ. ಊರಿಗೆ ನಾಯಕರಾಗಿದ್ದವರು ಶ್ರೀನಿವಾಸಗೌಡರು. ಅವರ ಮಾತನ್ನು ಯಾರೂ ತೆಗೆದುಹಾಕುತ್ತಿರಲಿಲ್ಲ. ಊರಿನಲ್ಲಿ ಯಾವುದೇ ಕೆಲಸವಾಗಬೇಕಾದರೂ ಗೌಡರದೇ ಕೊನೆಯ ಮಾತು. ಗೌಡರ ಮಾತಿಗೆ ಅಷ್ಟೊಂದು ಬೆಲೆ, ಗೌರವ. ಆದರೆ ಅವರ ಹೆಂಡತಿ ಮಾತ್ರ ಬಹಳ ಅಹಂಕಾರದ ಸ್ವಭಾವದವಳು. ಅವಳು ಯಾರ ಬಗ್ಗೆಯೂ ಒಳ್ಳೆಯ ಮಾತು ಆಡಿದವಳಲ್ಲ. ತಾನು ತುಂಬ ಹಣವಂತಳು ಎಂಬ ದರ್ಪ ಬೇರೆ.

ಒಂದು ಸಲ ಈ ಊರಿಗೆ ಮಹಾತ್ಮರೊಬ್ಬರ ಆಗಮನವಾಯಿತು. ಅವರು ಸಿದ್ಧಿಪುರುಷರೆಂದೂ, ಮಹಾಜ್ಞಾನಿಗಳೆಂದೂ ಜನ ಹೇಳುತ್ತಿದ್ದರು. ಸಾಯಂಕಾಲದ ಅವರ ಪ್ರವಚನಕ್ಕೆ ಊರ ಜನರೆಲ್ಲ ಹೋಗುತ್ತಿದ್ದರು. ಆದರೆ ಗೌಡತಿ ಮಾತ್ರ ಹೋಗಲಿಲ್ಲ ಆಕೆಗೆ ಹೋಗಬೇಕೆಂಬ ಆಸೆ ಇದ್ದರೂ, ಸಾಧಾರಣ ಜನರಂತೆ ತಾನು ಅಲ್ಲಿಗೆ ಹೇಗೆ ಹೋಗುವುದು. ಎಂಬ ಚಿಂತೆ ಅವಳದು. ಹಾಗಿರುವಾಗ ಒಂದು ದಿನ ಮನೆಯ ಮುಂದೆ ಯಾರೋ "ಭವತಿ ಭಿಕ್ಷಾಂ ದೇಹಿ" ಎಂದು ಕೂಗಿದ ಧ್ವನಿ ಕೇಳಿಸಿತು. ಮುಂದೆ ಬಂದು ನೋಡಿದರೆ ಆ ಮಹಾತ್ಮರೇ ಬಂದು ನಿಂತಿದ್ದಾರೆ. ಆಕೆಗೆ ಆಶ್ಚರ್ಯ, ಸಂತೋಷಗಳೆರಡೂ ಆದವು. ಯಾರನ್ನು ಹೋಗಿ ನೋಡಲು ತನ್ನ ಅಭಿಮಾನ ಅಡ್ಡ ಬಂದು ನಿಂತಿತ್ತೋ ಅವರೇ ಮನೆಯ ಮುಂದೆ ನಿಂತಿದ್ದಾರೆ. "ಒಂದು ನಿಮಿಷ ಇರಿ", ಎಂದವಳೇ ಒಳಗೆ ಓಡಿ ಮನೆಯಲ್ಲಿ ಸಿದ್ಧವಾಗಿದ್ದ ಆಹಾರ, ಉತ್ತಮವಾದ ಹಣ್ಣುಗಳನ್ನು ತಂದು ಮಹಾತ್ಮರ ಭಿಕ್ಷಾ ಪಾತ್ರೆಗೆ ಹಾಕಿದಳು. ಅವರು ಆಕೆಯನ್ನು ಹರಸಿ ಮುಂದೆ ನಡೆದರು. ಆಗ ಆಕೆ, "ಸ್ವಾಮೀ ನನಗೆ ಭಗವಂತನ ಬಗ್ಗೆ ತಿಳಿಯಬೇಕೆಂಬ ತುಂಬ ಆಸೆಯಿದೆ. ತಾವು ದಯವಿಟ್ಟು ನನಗೆ ಸ್ವಲ್ಪ ಉಪದೇಶ ಮಾಡುತ್ತೀರಾ? ಎಂದು ಕೇಳಿದಳು. ಆಗ ಅವರು ಆಕೆಯನ್ನು ಒಂದು ಕ್ಷಣ ದಿಟ್ಟಿಸಿ ನೋಡಿ, "ತಾಯೀ, ಇಂದು ಹೊತ್ತು ಹೆಚ್ಚಾಗಿ ಹೋಗಿದೆ. ನಾಳೆ ಬಂದಾಗ ಸ್ವಲ್ಪ ತಿಳಿಸುತ್ತೇನೆ", ಎಂದು ಹೊರಟೇ ಬಿಟ್ಟರು.

ಮರುದಿನ ಗೌಡತಿ, ಮಹಾತ್ಮರು ತನ್ನ ಮನೆಗೆ ಬರುತ್ತಾರೆಂದು ಬೇಗ ಎದ್ದು ಮನೆಯನ್ನು ಶುಚಿಮಾಡಿ, ತಾನೂ ಸ್ನಾನ ಮಾಡಿ, ಅತ್ಯಂತ ರುಚಿಕರವಾದ ಪಾಯಸವನ್ನು ಮಾಡಿಟ್ಟಳು. ಎಲ್ಲ ಶ್ರೇಷ್ಠ ಪದಾರ್ಥಗಳನ್ನು ಹಾಕಿ ಮಾಡಿದ್ದರಿಂದ ಅದರ ಘಮಘಮ ವಾಸನೆ ಮನೆಯನ್ನೆಲ್ಲ ತುಂಬಿತು. ಸ್ವಾಮಿಗಳ ಬರವನ್ನು ಕಾಯುತ್ತ ಬಾಗಿಲ ಮುಂದೆಯೇ ಕುಳಿತಿದ್ದಳು. ಮಧ್ಯಾಹ್ನ ಹನ್ನೆರಡು ಗಂಟೆಗೆ "ಭವತಿ ಭಿಕ್ಷಾಂ ದೇಹಿ" ಎಂಬ ಕೂಗು ಕೇಳಿಸಿತು. ಗೌಡತಿ ಪಾಯಸದ ಪಾತ್ರೆಯನ್ನು ಹಿಡಿದುಕೊಂಡು ಮುಂದಿನ ಬಾಗಿಲ ಕಡೆಗೆ ಓಡಿದಳು. ಮಹಾತ್ಮರು ಭಿಕ್ಷಾ ಪಾತ್ರೆಯನ್ನು ಮುಂದೆ ಚಾಚಿ ಹಿಡಿದುಕೊಂಡಿದ್ದಾರೆ. ಪಾಯಸವನ್ನು ಅದಕ್ಕೆ ಸುರಿಯಬೇಕೆಂದು ಮುಂದೆ ಬಗ್ಗಿ ನೋಡಿದಾಗ ಆಕೆಗೆ ಗಾಬರಿಯಾಯಿತು. ಆ ಭಿಕ್ಷಾಪಾತ್ರೆ ತುಂಬ ಕೊಳಕಾಗಿತ್ತು. ಅದರಲ್ಲಿ ಕಸ, ಕಡ್ಡಿ, ಮಣ್ಣು, ಸಗಣಿ ಎಲ್ಲ ಇತ್ತು. ಈಕೆ ಪಾಯಸವನ್ನು ಹಾಕಲು ಹಿಂದೆಮುಂದೆ ನೋಡುತ್ತಿದ್ದಾಗ ಅವರು, "ಪರವಾಯಿಲ್ಲ ಇದರಲ್ಲೇ ಹಾಕು ತಾಯಿ", ಎಂದರು. "ಛೇ ಛೇ ಇಷ್ಟು ಒಳ್ಳೆಯ ಪದಾರ್ಥವನ್ನು ಇಂಥ ಕೊಳಕು ಪಾತ್ರೆಯಲ್ಲಿ ಹಾಕುವುದೇ ಅದನ್ನು ಕೊಡಿ" ಎಂದು ಅವರ ಕೈಯಿಂದ ಅದನ್ನು ಕಿತ್ತುಕೊಂಡು ಒಳಗೆ ಹೋಗಿ ಅದನ್ನು ಚೆನ್ನಾಗಿ ಉಜ್ಜಿ, ಉಜ್ಜಿ ತೊಳೆದಳು. ಅದನ್ನು ಚೆನ್ನಾಗಿ ಒರೆಸಿ ಅದರ ತುಂಬ ಪಾಯಸವನ್ನು ಹಾಕಿ ತಂದುಕೊಟ್ಟು ನಮಸ್ಕರಿಸಿದಳು. ಅವರು ಪಾತ್ರೆಯನ್ನು ತೆಗೆದುಕೊಂಡು ಆಶೀರ್ವದಿಸಿ ಮುಂದೆ ನಡೆದರು. ಗೌಡತಿ ಅವರನ್ನು ತಡೆದು, "ಸ್ವಾಮೀ, ಇಂದು ಉಪದೇಶ ನೀಡುತ್ತೇವೆ ಎಂದು ಹೇಳಿದ್ದೀರಲ್ಲ", ಎಂದು ನೆನಪಿಸಿದಳು. ಆಗ ಮಹಾತ್ಮರು, ಆಯಿತಲ್ಲಮ್ಮ ಉಪದೇಶ" ಎಂದರು ಹೌದೇ? ಯಾವಾಗ? ಏನು ಉಪದೇಶ?", ಎಂದು ಆಶ್ಚರ್ಯದಿಂದ ಕೇಳಿದಳು. "ಈಗ ನೀನೇ ಮಾಡಿ ತೋರಿಸಿದೆಯಲ್ಲ. ಕೊಳಕು ಪಾತ್ರೆಯಲ್ಲಿ ಶುದ್ಧ ವಸ್ತುವನ್ನು ಹಾಕಬಾರದೆಂದು. ಅಂತೆಯೇ ನಿನ್ನ ಮನಸ್ಸೆಂಬ ಪಾತ್ರೆಯಲ್ಲಿ, ದ್ವೇಷ, ಅಸೂಯೆ, ಅಹಂಕಾರ, ಕೋಪ, ತಾಪಗಳಂತಹ ಕೊಳಕು ತುಂಬಿದಾಗ ಅತ್ಯಂತ ಪರಿಶುದ್ಧವಾದ ಪರಮಾತ್ಮನ ಚಿಂತನೆ ಅಲ್ಲಿ ನೆಲೆಸುವುದಿಲ್ಲ. ಆದ್ದರಿಂದ ಮನಸ್ಸನ್ನು ಶುದ್ಧಮಾಡಿದಾಗ ಭಕ್ತಿ ತಾನೇ ತಾನಾಗೆ ಇಳಿದು, ಭಗವಂತನ ದರ್ಶನವಾಗುತ್ತದೆ". ಎಂದು ಮುಂದೆ ನಡೆದರು. ಮಹಾತ್ಮರು.

ಅವರ ಮಾತು ಅವಳ ಮನದೊಳಗೆ ನಾಟಿ, ತನ್ನನ್ನು ತಿದ್ದಿಕೊಂಡಳು ಗೌಡತಿ. ಈ ಮಾತು ನಮಗೂ ಅನ್ವಯವಾಗುತ್ತದೆ. ಮನಸ್ಸೇ ಎಲ್ಲದಕ್ಕೂ ಕಾರಣ. "ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ" ಮನುಷ್ಯನ ಮುಕ್ತಿಗೂ, ಬಂಧನಕ್ಕೂ ಮನಸ್ಸೇ ಕಾರಣ.

---


**"ಸರಯೂ" ಸಂಪಾದಕ ಮಂಡಳಿ**

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ

**ಸಹಸಂಪಾದಕರು :**
ದಿವ್ಯಾ ಕುಮಾರಿ, ಸುಮಿತ್ರಾ ಎಸ್.ಜಿ.,
ಮೃದುಲಾ ಹೆಗ್ಡೆ, ಮಹೇಶ ನೆಟ್ಲ,
ಶಕೀಲಾ ಕುಮಾರಿ, ಜಯಾನಂದ ಪೆರಾಜೆ

**ವ್ಯವಸ್ಥಾಪಕ ಸಂಪಾದಕರು :**
ಸತೀಶ ಭಟ್, ಶಿವಗಿರಿ

**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ

**ವಿನ್ಯಾಸ :**
ಕುಶಾಲಪ್ಪ ಅಮ್ಟೂರು


# ಶಿಶುಮಂದಿರ ವಿಭಾಗ



**ದಾಖಲಾತಿಯಲ್ಲಿ ಶತಕ ಪೂರೈಸಿದ ಶಿಶುಮಂದಿರ**

ಶ್ರೀರಾಮ ವಿದ್ಯಾಕೇಂದ್ರದ ಆಶ್ರಯದಲ್ಲಿ ನಡೆಯುವ ಶ್ರೀರಾಮ ಶಿಶುಮಂದಿರದಲ್ಲಿ ಗೌರಿ ಗಣೇಶ ಹಬ್ಬದ ಶುಭದಿನ ದಿನಾಂಕ 18.09.2012ರಂದು ಶಿಶುಗಳು(ಪುಟಾಣಿಗಳು) 100 ಸಂಖ್ಯೆ ದಾಖಲಾತಿಯಾಗುವುದರೊಂದಿಗೆ ದಾಖಲೆಯನ್ನು ನಿರ್ಮಿಸಿದೆ. 25 ವರ್ಷದಿಂದ ನಡೆಯುತ್ತಾ ಬಂದಿರುವ ಶಿಶುಮಂದಿರದ ಪುಟಾಣಿಗಳಿಗೆ ವಿದ್ಯಾಕೇಂದ್ರದ ಸಂಚಾಲಕರಾದ ಡಾ. ಪ್ರಭಾಕರ ಭಟ್ ಸಿಹಿ ತಿನ್ನಿಸಿ, ಶುಭ ಹಾರೈಸಿದರು. ಶಿಶುಮಂದಿರದ ಶಿಕ್ಷಕಿಯರಿಗೆ, ಸಹಾಯಕಿಯರಿಗೆ ಅಭಿನಂದನೆ ಸಲ್ಲಿಸಿದರು.

# ಪ್ರಾಥಮಿಕ ಶಾಲಾ ವಿಭಾಗ

## ಶಿಕ್ಷಕರ ದಿನಾಚರಣೆ 5.9.2012

ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರ ಮಾರ್ಗದರ್ಶನದೊಂದಿಗೆ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು. ವಿದ್ಯಾರ್ಥಿಗಳು ಎಲ್ಲಾ ಶಿಕ್ಷಕ – ಶಿಕ್ಷಕಿಯರಿಗೆ ಹೂಗುಚ್ಛ ನೀಡಿ ಆಶೀರ್ವಾದ ಪಡೆದರು. ನೇಹಾ ಮಾತಾಜಿ ದಿನಾಚರಣೆಯ ಮಹತ್ವವನ್ನು ತಿಳಿಸಿದರು. ಕಾರ್ಯಕ್ರಮದಲ್ಲಿ ಹಿರಿಯ ಅಧ್ಯಾಪಕ ಶ್ರೀ ಗೋಪಾಲ ನಾರ್ಶ್ಯ ಉಪಸ್ಥಿತರಿದ್ದರು.

## ಜಿಲ್ಲಾ ಮಟ್ಟದ ಕಬಡ್ಡಿ – ಪ್ರಥಮ

ಪ್ರಾಥಮಿಕ ಶಾಲಾ ವಿಭಾಗದ ಬಾಲಕರ ಜಿಲ್ಲಾ ಮಟ್ಟದ ಕಬಡ್ಡಿ ಸ್ಪರ್ಧೆಯಲ್ಲಿ ಶ್ರೀರಾಮ ಪ್ರಾಥಮಿಕ ಶಾಲೆ ಕಲ್ಲಡ್ಕ ಪ್ರಥಮ ಸ್ಥಾನ ಪಡೆದುಕೊಂಡಿದೆ. ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಮಾತಾಜಿಯವರು ಆರತಿ, ಅಕ್ಷತೆ, ತಿಲಕಧಾರಣೆ ಮಾಡಿ ಅಭಿನಂದನೆ ಸಲ್ಲಿಸಿದರು. ಮತ್ತು ತಾಲೂಕು ಮಟ್ಟದ ಕಬಡ್ಡಿ ಪಂದ್ಯಾಟದಲ್ಲಿ ಪ್ರಥಮ ಸ್ಥಾನ ಪಡೆದ ಬಾಲಕ ಹಾಗೂ ಬಾಲಕಿಯರ ತಂಡಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ವೇದವ್ಯಾಸ ಧ್ಯಾನ ಮಂದಿರದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಸತೀಶ್ ಭಟ್, ಸದಸ್ಯರಾದ ಜಯರಾಮ ರೈ, ಆನಂದ ಶೆಟ್ಟಿ, ದಯಾನಂದ ಮತ್ತು ಮುಖ್ಯೋಪಾಧ್ಯಾಯ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.

## ಪೋಷಕರ ಸಭೆ 15.09.2012

ಶ್ರೀರಾಮ ಪ್ರಾಥಮಿಕ ಶಾಲಾ ವಿಭಾಗದ ಪೋಷಕರ ಸಭೆಯು ವೇದವ್ಯಾಸ ಮಂದಿರದಲ್ಲಿ ನಡೆಯಿತು. ಸುಮಾರು 500ಕ್ಕೂ ಹೆಚ್ಚು ಸಂಖ್ಯೆಯಲ್ಲಿ ಪೋಷಕರು ಭಾಗವಹಿಸಿದ್ದರು. ಸಂಸ್ಥೆಯ ಗುರಿ ಉದ್ದೇಶಗಳು ಈಡೇರುವಲ್ಲಿ ಸಂಸ್ಥೆಯ ಜೊತೆಗೆ ಪೋಷಕರ ಸಹಕಾರ ಅತೀ ಅಗತ್ಯ ಎಂದು ಪೋಷಕರ ಜೊತೆ ಸಂವಾದ ನಡೆಸುತ್ತಾ ಸಂಚಾಲಕ ಡಾ. ಪ್ರಭಾಕರ ಭಟ್ ಹೇಳಿದರು. ಪೋಷಕರ ಅಭಿಪ್ರಾಯ ಸಲಹೆಗಳನ್ನು ಪಡೆದು ಮಾರ್ಗದರ್ಶನ ಮಾಡಿದರು. ವೇದಿಕೆಯಲ್ಲಿ ವಿದ್ಯಾಕೇಂದ್ರದ ಅಧ್ಯಕ್ಷ ಶ್ರೀ ನಾರಾಯಣ ಸೋಮಯಾಜಿ, ಡಾ. ಕಮಲಾ ಪ್ರ.ಭಟ್, ಶಿವಗಿರಿ ಸತೀಶ್ ಭಟ್, ಜಯರಾಮ ರೈ, ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.



ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಭಾರತೀಯ ಜೀವವಿಮಾ ನಿಗಮದ ಅಭಿವೃದ್ಧಿ ಅಧಿಕಾರಿ ಮಧ್ವರಾಜ್ ಕಲ್ಮಾಡಿ ವಿಮೆಯ ಮಾಹಿತಿ ನೀಡಿದರು. ಮುಖ್ಯೋಪಾಧ್ಯಾಯ ಶ್ರೀ ರವಿರಾಜ್ ಸ್ವಾಗತಿಸಿ, ಶ್ರೀ ಪ್ರಕಾಶ್ ನಿರೂಪಿಸಿ ವಂದಿಸಿದರು.

## ಸಾಂಸ್ಕೃತಿಕ ಕಾರ್ಯಕ್ರಮ

7ನೇ ಶಂಕರ ತರಗತಿಯ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ 'ಸರಿಗಮಪ' ಎಂಬ ಹೆಸರಿನಡಿಯಲ್ಲಿ ವೇದವ್ಯಾಸ ಮಂಟಪದಲ್ಲಿ ನಡೆಯಿತು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ನೃತ್ಯ, ಜಾದೂ ಪ್ರದರ್ಶನ, ಮಿಮಿಕ್ರಿ, ಹಾಡು, ಕಿರು ಪ್ರಹಸನ ಮೊದಲಾದುದನ್ನು ಪ್ರದರ್ಶಿಸಿದರು.

# ಪ್ರೌಢಶಾಲಾ ವಿಭಾಗ

## ಪಾಲಕರ–ಶಿಕ್ಷಕರ ಸಭೆ 11–09–2012

ಮಗುವಿನ ನಡವಳಿಕೆ ಉತ್ತಮವಾಗಬೇಕು, ಆ ಮಗು ಕುಟುಂಬಕ್ಕೆ ಮತ್ತು ಸಮಾಜಕ್ಕೆ ಕೊಡುಗೆ ನೀಡುವ ವ್ಯಕ್ತಿಯಾಗಿ ರೂಪುಗೊಳ್ಳಬೇಕು. ಸಂಸ್ಥೆಯ ಜೊತೆಗೆ ಹೆತ್ತವರ ಸಹಕಾರವಿದ್ದಾಗ ಮಾತ್ರ ಈ ಫಲಿತಾಂಶ ನಿರೀಕ್ಷಿಸಲು ಸಾಧ್ಯ ಎಂದು ಸಂಸ್ಥೆಯ ಸಂಚಾಲಕ ಡಾ. ಪ್ರಭಾಕರ ಭಟ್ ಹೇಳಿದರು.

ವೇದಿಕೆಯಲ್ಲಿ ಆಡಳಿತ ಮಂಡಳಿ ಅಧ್ಯಕ್ಷ ಬಿ. ನಾರಾಯಣ ಸೋಮಯಾಜಿ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ವಿಶ್ವನಾಥ ಪ್ರಭು ಅಮ್ಟೂರು, ಕಾರ್ಯದರ್ಶಿ ಮುತ್ತಪ್ಪ, ಮುಖ್ಯೋಪಾಧ್ಯಾಯ ವಸಂತ ಮಾಧವ ಉಪಸ್ಥಿತರಿದ್ದರು. ಶಿಕ್ಷಕಿ ಶ್ರೀಮತಿ ಸೌಮ್ಯ ನಿರೂಪಿಸಿ, ರಮೇಶ್ ಎನ್ ವಂದಿಸಿದರು.





## ವಿಜ್ಞಾನ ಕಾರ್ಯಾಗಾರ – 12.09.2012

ಶ್ರೀರಾಮ ಪ್ರೌಢಶಾಲೆಯ ವಿಭಾಗದಲ್ಲಿ ಪ್ರಾಥಮಿಕ ಶಾಲೆಗಳ ಅಧ್ಯಾಪಕರ ಒಂದು ದಿನದ ವಿಜ್ಞಾನ ಕಾರ್ಯಾಗಾರ ನೆರವೇರಿತು. ಸುಮಾರು 45 ಶಿಕ್ಷಕರು ಭಾಗವಹಿಸಿದ್ದು, ಅಧ್ಯಾಪಕರು ಹೆಚ್ಚು ಶ್ರಮ ಪಟ್ಟರೆ ವಿದ್ಯಾರ್ಥಿಗಳು ಯಶಸ್ವಿಯಾಗಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳ ಯಶಸ್ಸಿಗೆ ಹೊಸ ಹೊಸ ಪ್ರಯೋಗಗಳನ್ನು ಮಾಡಬೇಕೆಂದು ವಿದ್ಯಾಕೇಂದ್ರದ ಸಂಚಾಲಕ ಡಾ. ಪ್ರಭಾಕರ ಭಟ್ ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿ ತಿಳಿಸಿದರು. ವಿಜ್ಞಾನ ಶಿಕ್ಷಕ ಗೋಪಾಲ ಎಂ. ನಾನಾ ಪ್ರಯೋಗಗಳನ್ನು ಮಾಡಿ ತೋರಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಸುಧಾಕರ ಮಾತನಾಡುತ್ತಾ ಸರ್ಕಾರಿ ಶಾಲೆಗಳನ್ನು ಮಾದರಿ ಶಾಲೆಗಳನ್ನಾಗಿ ಮಾಡಬೇಕು. ಕನ್ನಡ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳೂ ಕನಿಷ್ಠ 4–5 ಪ್ರಯೋಗಗಳನ್ನು ಮಾಡುವಂತೆ ಪ್ರಯತ್ನಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಸದಸ್ಯ ಚೆನ್ನಪ್ಪ ಕೋಟ್ಯಾನ್, ತಾಲೂಕು ಸಮನ್ವಯಾಧಿಕಾರಿ ಕಮಲಾಕ್ಷ, ಶಾಲಾ ಮುಖ್ಯೋಪಾಧ್ಯಾಯ ವಸಂತ ಮಾಧವ ಉಪಸ್ಥಿತರಿದ್ದರು.

## ಚಿಣ್ಣರ ಕ್ರೀಡಾ ಅಭಿಯಾನ 12.09.2012

ಸರ್ವಶಿಕ್ಷಣ ಅಭಿಯಾನದ ತಾಲೂಕು ಮಟ್ಟದ ಸರ್ಕಾರಿ ಶಾಲೆಗಳ ಕ್ರೀಡಾಪಟುಗಳ ಆಯ್ಕೆ ಚಿಣ್ಣರ ಕ್ರೀಡಾ ಅಭಿಯಾನ. ತಾಲೂಕು

ಮಟ್ಟದ ಎಲ್ಲಾ ಕ್ರೀಡಾಪಟುಗಳ ಆಯ್ಕೆ ದಿನಾಂಕ ಶ್ರೀರಾಮ ವಿದ್ಯಾಕೇಂದ್ರದ ಮೈದಾನದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಶಾರೀರಿಕ ಶಿಕ್ಷಣ ಶಿಕ್ಷಕ ಸಂಘದ ಅಧ್ಯಕ್ಷ ನವೀನ ಪಿ.ಎಸ್. ಅಜ್ಜಿಬೆಟ್ಟು, ಜಿಲ್ಲಾ ಉಪಾಧ್ಯಕ್ಷ ಅಖಿಲ್ ಶೆಟ್ಟಿ, ದೈ.ಶಿ. ಪರಿವೀಕ್ಷಣಾಧಿಕಾರಿ ವಿಠಲ ನಾಯಕ್, ಸಮನ್ವಯಾಧಿಕಾರಿ ಕಮಲಾಕ್ಷ, ಪ್ರಾ. ಶಿ. ಸಂಘದ ಅಧ್ಯಕ್ಷ ಜಯರಾಮ ಉಪಸ್ಥಿತರಿದ್ದರು.

**ವಿಜ್ಞಾನ ವಸ್ತು ಪ್ರದರ್ಶನ 06.09.2012**

ಬಂಟ್ವಾಳ ತಾಲೂಕು ಮಟ್ಟದ ವಿಜ್ಞಾನ ವಸ್ತು ಪ್ರದರ್ಶನದಲ್ಲಿ ಶ್ರೀರಾಮ ಪ್ರೌಢಶಾಲೆಯಲ್ಲಿ ನಡೆಯಿತು. 15 ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು. 10ನೇ ಭಾರ್ಗವ ತರಗತಿಯ ಧನ್ವಿಶ್ ಕುಮಾರ್ ಆರ್.ವಿ. ಇವರು ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.



**ಅಗಸ್ತ್ಯ ಫೌಂಡೇಶನ್ 07.09.2012**

ಅಗಸ್ತ್ಯ ಫೌಂಡೇಶನ್ ಇವರ ನೇತೃತ್ವದಲ್ಲಿ ವಿಜ್ಞಾನ ಪ್ರಯೋಗ ಪ್ರಾತ್ಯಕ್ಷಿಕೆ ಮಧುಕರ ಸಭಾಂಗಣದಲ್ಲಿ ಜರಗಿತು. 30 ಪ್ರಯೋಗಗಳನ್ನು ಪ್ರೌಢಶಾಲಾ ವಿದ್ಯಾರ್ಥಿಗಳು ಮಾಡಿ ವಿವರಿಸಿದರು. ಪ್ರೌಢಶಾಲಾ ಮತ್ತು ಪ್ರಾಥಮಿಕ ಶಾಲೆಯ ಎಲ್ಲಾ ವಿದ್ಯಾರ್ಥಿಗಳು ಪ್ರಯೋಗ ವೀಕ್ಷಿಸಿ ಸಂತಸ ವ್ಯಕ್ತಪಡಿಸಿದರು.



**ಶಿಕ್ಷಕರ ಕಾರ್ಯಾಗಾರ: 6,7–9–2012**

ದಕ್ಷಿಣ ಕನ್ನಡ ಜಿಲ್ಲೆಯ ಶಿಕ್ಷಕರಾಗಿ ಎಸ್ಸೆಸ್ಸೆಲ್ಸಿ ಪ್ರಶ್ನೆ ಪತ್ರಿಕೆ ಕಾರ್ಯಾಗಾರವನ್ನು ಶಿಕ್ಷಣ ಇಲಾಖೆಯ ನಿರ್ದೇಶನದಂತೆ ವಿದ್ಯಾಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು.

ದ.ಕ. ಜಿಲ್ಲೆಯ ಎಲ್ಲಾ ತಾಲೂಕುಗಳಿಂದ 80 ಮಂದಿ ಶಿಕ್ಷಕರು ಭಾಗವಹಿಸಿ, ಕನ್ನಡ ಮತ್ತು ಸಮಾಜ ವಿಜ್ಞಾನ ಪತ್ರಿಕೆಗಳನ್ನು ನೋಡೆಲ್ ಅಧಿಕಾರಿ ನರಸಿಂಹ ಭಟ್ ಇವರ ಮಾರ್ಗದರ್ಶನದಲ್ಲಿ ತಯಾರಿಸಿದರು.

ಈ ಸಂದರ್ಭದಲ್ಲಿ ವಿದ್ಯಾಕೇಂದ್ರದ ಸಂಚಾಲಕ ಡಾ। ಪ್ರಭಾಕರ ಭಟ್ ಶಿಕ್ಷಕರನ್ನುದ್ದೇಶಿಸಿ ಮಾತನಾಡಿದರು. ವಿದ್ಯಾರ್ಥಿಗಳನ್ನು ಕೇವಲ ಪರೀಕ್ಷೆಗಾಗಿ ಸಿದ್ಧತೆಗೊಳಿಸುವುದು ಮಾತ್ರವಲ್ಲದೆ ಅವರ ಭಾಷೆ, ಸಂಸ್ಕೃತಿ ಜ್ಞಾನವನ್ನು ಹೆಚ್ಚಿಸಬೇಕು. ಉತ್ತಮ ಗುಣ ನಡೆಗಳನ್ನು ಮಕ್ಕಳಲ್ಲಿ ಬೆಳೆಸುವಲ್ಲಿ ಶಿಕ್ಷಕರ ಜವಾಬ್ದಾರಿ ಇದೆ ಎಂದು ಹೇಳಿದರು.



**ಶೈಕ್ಷಣಿಕ ಪ್ರವಾಸ: 9.9.2012**

8ನೇ ತರಗತಿಯ ವಿದ್ಯಾರ್ಥಿಗಳಿಗೆ ಒಂದು ದಿನದ ಪ್ರವಾಸವನ್ನು ವೇಣೂರು ಮಹಾಲಿಂಗೇಶ್ವರ ದೇವಸ್ಥಾನ, ಕಾರ್ಕಳ ಬಾಹುಬಲಿ ಮೂರ್ತಿ, ಮೂಡಬಿದಿರೆಯ ಸಾವಿರ ಕಂಬ ಬಸದಿ, ಆಳ್ವಾಸ್ ಶೋಭವನ, ಕೊಡ್ಯಡ್ಕದ ಅನ್ನಪೂರ್ಣೇಶ್ವರಿ ದೇವಸ್ಥಾನ, ಪಿಲಿಕುಳ ನಿಸರ್ಗಧಾಮ – ಮೃಗಾಲಯ ಹಾಗೂ ನಂದಿನಿ ಹಾಲು ಸಂಸ್ಕರಣಾ ಘಟಕಕ್ಕೆ ಹಮ್ಮಿಕೊಳ್ಳಲಾಗಿತ್ತು. 32 ವಿದ್ಯಾರ್ಥಿಗಳು ಮತ್ತು 5 ಶಿಕ್ಷಕರು ಭಾಗವಹಿದ್ದರು.


ಥಂಬಾರ್‌ಷಾಯೋ


ಬಿಷಾರ್‌ಲಾಂಗ್


ಸೆಲ್ವಿಸ್ಟರ್


ರಂಜಿತಾ

**ಕಲ್ಲಡ್ಕ ವಲಯ ಮಟ್ಟದ ಕ್ರೀಡಾಕೂಟ:**

ಇಲಾಖಾ ಮಟ್ಟದ ಕಲ್ಲಡ್ಕ ವಲಯ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳ ಕ್ರೀಡಾಕೂಟವು ಪ್ರೌಢಶಾಲಾ ಕ್ರೀಡಾಂಗಣದಲ್ಲಿ ಜರಗಿತು.

ಪೂರ್ವಾಹ್ನ 7ರಿಂದ ಸಂಜೆ 5ರವರೆಗೆ ನಡೆದ ಕ್ರೀಡಾಕೂಟದಲ್ಲಿ ವಲಯದ 30ಕ್ಕಿಂತಲೂ ಹೆಚ್ಚು ಶಾಲೆಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

17ರ ವಯೋಮಾನದ ಬಾಲಕರ ವಿಭಾಗದಲ್ಲಿ ಪ್ರೌಢಶಾಲೆಯ ಥಂಬಾರ್‌ಷಾಯೋ, ಪ್ರಾಥಮಿಕ ಶಾಲಾ ವಿಭಾಗದಲ್ಲಿ ಬಾಲಕರಲ್ಲಿ ಶ್ರೀರಾಮ ಪ್ರಾಥಮಿಕ ಶಾಲೆಯ ಬಿಷಾರ್‌ಲಾಂಗ್, ಸೆಲ್ವಿಸ್ಟರ್ ಹಾಗೂ ಬಾಲಕಿಯರಲ್ಲಿ ಪ್ರಾಥಮಿಕ ಶಾಲೆಯ ರಂಜಿತಾ ವೈಯಕ್ತಿಕ ಪ್ರಶಸ್ತಿ ತನ್ನದಾಗಿಸಿಕೊಂಡರು.

**ಯುವಕಿರಣ:**

ವೀರ ಸಂನ್ಯಾಸಿ ಸ್ವಾಮಿ ವಿವೇಕಾನಂದರ 150ನೇ ಜನ್ಮದಿನಾಚರಣೆಯ ಪೂರ್ವ ಸಿದ್ಧತೆ ಹಾಗೂ ವಿಚಾರ ಸಂಕಿರಣವನ್ನು ವಿದ್ಯಾಕೇಂದ್ರದ ಅಜಿತಕುಮಾರ ಸಭಾಂಗಣದಲ್ಲಿ ಪ್ರೌಢಶಾಲೆ ಮತ್ತು ಪ.ಪೂ ಕಾಲೇಜಿನ ಶಿಕ್ಷಕರಿಗಾಗಿ ಏರ್ಪಡಿಸಲಾಗಿತ್ತು. 2013 ಜನವರಿ 12ರಿಂದ 2014ರ ಜನವರಿ 12ರವರೆಗೆ ವಿವೇಕಾನಂದರ ವರ್ಷಾಚರಣೆಯ ಅಂಗವಾಗಿ ಶಾಲಾ ಕಾಲೇಜುಗಳಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲಾಯಿತು.



ಬಂಟ್ವಾಳ ಕ್ಷೇತ್ರ ಶಿಕ್ಷಣಾಧಿಕಾರಿ ಸುಧಾಕರ 'ಯುವಕಿರಣ' ವಿಚಾರ ಸಂಕಿರಣವನ್ನು ಉದ್ಘಾಟಿಸಿ ವಿವೇಕಾನಂದರ ವ್ಯಕ್ತಿತ್ವದ ಪ್ರೇರಣೆಯಿಂದ ನಾವೇನು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಬೇಕು ಎಂಬುದನ್ನು ಕ್ರಿಯಾಯೋಜನೆ ಮಾಡಿಕೊಳ್ಳಬೇಕು ಅವರ ಸಂದೇಶ ಶಿಕ್ಷಕರಿಗೂ, ಶಿಕ್ಷಣಕ್ಕೂ ಮಾರ್ಗದರ್ಶಿಯಾಗಿದೆ ಎಂದರು.

ರಾಜ್ಯ ಯುವ ವಿಭಾಗ ಸಂಘಟನೆಯ ಪ್ರಮುಖರಾದ ನ್ಯಾಯವಾದಿ ಸುವ್ರತ್ ಕುಮಾರ್ ಪ್ರಸ್ತಾವನೆಗೈದು ವಿವೇಕಾನಂದರ ಜೀವನವೇ ಒಂದು ಸಂದೇಶ. ಅವರ ಚಿಂತನೆ ಹಾಗೂ ಜೀವನದ ಅಧ್ಯಯನದಿಂದ ಶಿಕ್ಷಣಕ್ಕೆ ಹೊಸದಿಕ್ಕು ಸಿಗುವುದೆಂದರು. ಡಾ॥ ಪ್ರಭಾಕರ ಭಟ್, ಶ್ರೀ ಬಿ. ನಾರಾಯಣ ಸೋಮಯಾಜಿ, ಮುಖ್ಯೋಪಾಧ್ಯಾಯ ಶ್ರೀ ವಸಂತ ಮಾಧವ, ಪ್ರಾಚಾರ್ಯ ಶ್ರೀ ಕೃಷ್ಣಪ್ರಸಾದ ಮಾರ್ಗದರ್ಶನ ಮಾಡಿದರು.

**ವಿವೇಕಾನಂದ ವಿದ್ಯಾವರ್ಧಕ ಸಂಘದ ವತಿಯಿಂದ ಪುತ್ತೂರಿನ ವಿವೇಕಾನಂದ ಕಾಲೇಜಿನ ಪ್ರಭಾಕರ ರಾವ್ ಸಭಾಂಗಣದಲ್ಲಿ ನಡೆದ ಪತ್ರಿಕೋದ್ಯಮ ಕಾರ್ಯಾಗಾರದಲ್ಲಿ ಸಂಸ್ಥೆಯ ಎಲ್ಲಾ ವಿಭಾಗಗಳ ಸರಯೂ ಸಂಪಾದಕ ಮಂಡಳಿಯ ಸದಸ್ಯರು ಭಾಗವಹಿಸಿ ಮಾಹಿತಿ ಪಡೆದರು.**

# ಪದವಿಪೂರ್ವ ವಿಭಾಗ



### ಶ್ರಮದಾನ 2.9.2012

ಭಗೀರಥ ಸಾಹಸಿಗರ ಸಂಘದ ವತಿಯಿಂದ ಸುದ–ಕಾರ್ ಕೃಷಿಭೂಮಿಯಲ್ಲಿ ಶ್ರಮದಾನ ನಡೆಯಿತು. 24 ವಿದ್ಯಾರ್ಥಿಗಳು, 22 ವಿದ್ಯಾರ್ಥಿನಿಯರು ಬೆಳಗ್ಗಿನಿಂದ ಮಧ್ಯಾಹ್ನದ ತನಕ ಕಳೆಕೀಳುವುದು, ತೆಂಗಿನ ಬುಡ ಬಿಡಿಸುವುದು, ತೆಂಗಿನಕಾಯಿ ಸಾಗಿಸುವ ಕೆಲಸಗಳನ್ನು ಬಹಳ ಉತ್ಸಾಹದಿಂದ ಮಾಡಿದರು. ಸಂಘದ ನಿರ್ದೇಶಕ ಶ್ರೀ ಗಿರೀಶ್ ಮಂಗಲ್ಪಾಡಿ ಹಾಗೂ ಸುಷ್ಮಾ, ಶ್ರೀ ಕೃಷ್ಣಪ್ರಸಾದ್, ಶ್ರೀ ಮಹೇಶ್, ಶ್ರೀ ಕರುಣಾಕರ, ಶ್ರೀ ಗಣೇಶ್ ವಾಗ್ಲೆ ಜೊತೆಗಿದ್ದರು. ಕೃಷಿ ನಿರ್ದೇಶಕ ಶ್ರೀ ಜಯರಾಮ ಸುಧೆಕಾರ್ ಸಹಕರಿಸಿದರು.



### ಅಖಿಲ ಭಾರತ ಮಟ್ಟದ ಕಬಡ್ಡಿ ಪಂದ್ಯಾಟಕ್ಕೆ ಆಯ್ಕೆ

ಕೇರಳದ ಕಲ್ಲಿಕೋಟೆಯಲ್ಲಿ ನಡೆದ ವಿದ್ಯಾಭಾರತಿಯ ಕ್ಷೇತ್ರೀಯ ಮಟ್ಟದ ಕಬಡ್ಡಿ ಪಂದ್ಯಾಟದಲ್ಲಿ ಪ.ಪೂ ವಿಭಾಗದ ಬಾಲಕರ ತಂಡ ದ್ವಿತೀಯ ಸ್ಥಾನ, ಬಾಲಕಿಯರ ತಂಡ ಪ್ರಥಮ ಸ್ಥಾನ ಪಡೆದಿರುತ್ತಾರೆ. ಛತ್ತೀಸಗಡದಲ್ಲಿ ನಡೆಯುವ ಅಖಿಲ ಭಾರತ ಮಟ್ಟದ ಕಬಡ್ಡಿ ಪಂದ್ಯಾಟದಲ್ಲಿ ಬಾಲಕಿಯರ ತಂಡವು ಭಾಗವಹಿಸಲಿರುವುದು.



### ಸಾಂಸ್ಕೃತಿಕ ಕಾರ್ಯಕ್ರಮ : 12.09.2012

ಭಾವನಾ ಸಾಂಸ್ಕೃತಿಕ ಸಂಘದ ವತಿಯಿಂದ ದ್ವಿತೀಯ ಕಲಾ ವಿಭಾಗದ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ವಿವಿಧ ಪ್ರಕಾರದ ನೃತ್ಯಗಳು, ನಾಟಕಗಳು, ರೂಪಕಗಳು ಮೂಡಿಬಂದವು. ಭಾಗ್ಯಶ್ರೀ ಬಿ.ಯಸ್ ನಿರೂಪಿಸಿದರು. 28.09.2012ರಂದು ಭಾವನಾ ಸಾಂಸ್ಕೃತಿಕ ಸಂಘದ ವತಿಯಿಂದ ನಡೆಲ್ಪಡುವ ಭಜನಾ ಕಾರ್ಯಕ್ರಮವನ್ನು ದ್ವಿತೀಯ ಕಲಾ ವಿಭಾಗದ ವಿದ್ಯಾರ್ಥಿಗಳು ನಡೆಸಿಕೊಟ್ಟರು. ಸೆಪ್ಟೆಂಬರ್ ತಿಂಗಳಲ್ಲಿ ಹುಟ್ಟು ಹಬ್ಬ ಆಚರಿಸಿದ ವಿದ್ಯಾರ್ಥಿಗಳು ಶ್ರದ್ಧಾನಿಧಿಯನ್ನು ಅರ್ಪಿಸಿದರು. ಇದೇ ಸಂದರ್ಭದಲ್ಲಿ ಕ್ರಾಂತಿಕಾರಿ ಭಗತ್‌ಸಿಂಗ್ ಅವರ 105 ಜನ್ಮದಿನದ ಪ್ರಯುಕ್ತ ಅವರಿಗೆ ನುಡಿ ನಮನ ಸಲ್ಲಿಸಲಾಯಿತು.



### ಕಾರಿಂಜ ಕ್ಷೇತ್ರಕ್ಕೆ ಭೇಟಿ – 16.09.2012

ಭಗೀರಥ ಸಾಹಸಿಗರ ಸಂಘದ ವಿದ್ಯಾರ್ಥಿಗಳು ಬಂಟ್ವಾಳ ತಾಲೂಕಿನ ಪ್ರೇಕ್ಷಣೀಯ ಸ್ಥಳಗಳಲ್ಲಿ ಒಂದಾದ ಕಾರಿಂಜ ಕ್ಷೇತ್ರಕ್ಕೆ ಭೇಟಿ ನೀಡಿದರು. ದೇವಸ್ಥಾನದ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷ ಶಿವಪ್ಪ ಗೌಡ ಕ್ಷೇತ್ರದ ಬಗ್ಗೆ ಮಾಹಿತಿ ನೀಡಿದರು. 46 ವಿದ್ಯಾರ್ಥಿಗಳು ಇದರಲ್ಲಿ ಭಾಗಿಯಾಗಿದ್ದು, ಸಂಘದ ನಿರ್ದೇಶಕ ಗಿರೀಶ್ ಮಂಗಲ್ಪಾಡಿ, ಉಪನ್ಯಾಸಕಿ ಸುಷ್ಮಾ, ಸುಧಾ, ಅಮೃತಾ, ಸಮಿತಿ ಸದಸ್ಯ ಶ್ರೀ ಪುರಂದರ ಜೊತೆಗಿದ್ದರು.

### ಪ್ರಾಂತ ಮಟ್ಟದ ಕ್ರೀಡಾಕೂಟ ತಂಡ ಪ್ರಶಸ್ತಿ

ಬಳ್ಳಾರಿಯ ಹಗರಿ ಬೊಮ್ಮನ ಹಳ್ಳಿಯಲ್ಲಿ ನಡೆದ ವಿದ್ಯಾಭಾರತಿಯ ಪ್ರಾಂತ ಮಟ್ಟದ ಕ್ರೀಡಾಕೂಟದಲ್ಲಿ ಸಂಸ್ಥೆಯ ವಿದ್ಯಾರ್ಥಿಗಳು ಭಾಗವಹಿಸಿ ತಂಡ ಪ್ರಶಸ್ತಿಯನ್ನು ಪಡೆದಿರುತ್ತಾರೆ. ದ್ವಿತೀಯ ಪಿ.ಯು ವಾಣಿಜ್ಯ ವಿಭಾಗದ ತೇಜಸ್ವಿನಿ ನಾಲ್ಕು ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಗಳಿಸಿ ವೈಯಕ್ತಿಕ ಪ್ರಶಸ್ತಿಯನ್ನು ಪಡೆದಿರುತ್ತಾರೆ.

### ಚೆಸ್ ಮತ್ತು ಯೋಗಾಸನ: 14.09.2012

ಚೆನ್ನೈನಲ್ಲಿ ನಡೆದ ವಿದ್ಯಾಭಾರತಿ ಕ್ಷೇತ್ರೀಯ ಮಟ್ಟದ ಚೆಸ್ ಪಂದ್ಯಾಟದಲ್ಲಿ ಪ್ರಥಮ ಕಲಾ ವಿಭಾಗದ ರೇಖಾ ಇವರು ಭಾಗವಹಿಸಿ, ಪ್ರಥಮ ಸ್ಥಾನ ಗಳಿಸಿ ಅಖಿಲ ಭಾರತ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿರುತ್ತಾರೆ.

### ತಾ. ಮಟ್ಟದ ಕಬಡ್ಡಿ ಪ್ರಥಮ 07.09.2012

ಪ.ಪೂ ಶಿಕ್ಷಣ ಇಲಾಖೆಯ ವತಿಯಿಂದ ಬಂಟ್ವಾಳ ತಾಲೂಕು ಮಟ್ಟದ ಕಬಡ್ಡಿ ಪಂದ್ಯಾಟವು ವಿಠಲ ಪ.ಪೂ ಕಾಲೇಜಿನಲ್ಲಿ ನಡೆದಿದ್ದು, ಇದರಲ್ಲಿ ಶ್ರೀರಾಮ ಪ.ಪೂ ವಿಭಾಗದ ಬಾಲಕಿಯರ ತಂಡವು ಪ್ರಥಮ ಸ್ಥಾನ ಗಳಿಸಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತ್ತದೆ.

### ವಿಶೇಷ ಉಪನ್ಯಾಸ – ವರ್ತಮಾನ ಭಾರತ 26.09.2012

ಭಾವನಾ ಸಾಂಸ್ಕೃತಿಕ ಸಂಘದ ವತಿಯಿಂದ ವರ್ತಮಾನ ಭಾರತ ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಿತು. ಮಂಗಳೂರು ಸಹವಿಭಾಗ ಪ್ರಚಾರಕ್ ಶ್ರೀ ಪ್ರದೀಪ್ ಉಪನ್ಯಾಸ ನಡೆಸಿಕೊಟ್ಟರು.

“56 ದೇಶಗಳು ಸೇರಿ ಬೃಹತ್ ಭಾರತವಾಗಿದ್ದ ಈ ದೇಶ ಇಂದು ಭೌಗೋಳಿಕವಾಗಿಯೂ, ಸಾಂಸ್ಕೃತಿಕವಾಗಿಯೂ ತನ್ನ ವಿಸ್ತಾರವನ್ನು ಕಳೆದುಕೊಳ್ಳುತ್ತಿದೆಯಾದರೂ, ಜಗತ್ತಿನ ಮುಂದುವರೆದ ದೇಶಗಳು ಎಂದು ಕರೆಸಿಕೊಳ್ಳಲು ವಿಶ್ವಸಂಸ್ಥೆ ಇಟ್ಟಿರುವ ಮಾನ ದಂಡದ ಪ್ರಕಾರವು ಭಾರತ ಇಂದು ಮುಂದಿದೆ. ಅದರಲ್ಲೂ ಆಧ್ಯಾತ್ಮಿಕ, ರಕ್ಷಣಾತ್ಮಕ, ಭೌದ್ಧಿಕ, ಸಾಂಪತ್ತಿಕ ಶಕ್ತಿಯಿಂದ ಇಡೀ ಜಗತ್ತನ್ನು ಭಾರತ ಗೆದ್ದಿದೆ”. ಕಾರ್ಯಕ್ರಮದಲ್ಲಿ ಸಂಸ್ಥೆಯ ಸಂಚಾಲಕರು ಪ್ರೌಢಶಾಲಾ ಮುಖ್ಯೋಪಾಧ್ಯಾಯರು ಪ್ರಾಚಾರ್ಯರು ಉಪಸ್ಥಿತರಿದ್ದರು. ಕರೀಶ್ಮಾ ಸ್ವಾಗತಿಸಿ, ನವ್ಯಶ್ರೀ ವಂದಿಸಿ, ನಿಶಾ ರೈ ನಿರೂಪಿಸಿದರು.

### ಸಂವೇದನಾ ಶೀಲ ಸ್ಥಳಕ್ಕೆ ಭೇಟಿ 23.09.2012



ಭಾರವಿ ಸಂಸ್ಕೃತ ಸಂಘದ ವತಿಯಿಂದ ಸ್ವಾಮಿ ವಿವೇಕಾನಂದರ 150ನೇ ಜನ್ಮಾಚರಣೆಯ ಪ್ರಯುಕ್ತ ಕನ್ಯಾನ ಭಾರತ ಸೇವಾಶ್ರಮಕ್ಕೆ ಭೇಟಿ ನೀಡಲಾಯಿತು. ಅಲ್ಲಿನ ವೃದ್ಧರು, ನಿರ್ಗತಿ–ಕರು, ಬಡಮಕ್ಕಳೊಂದಿಗೆ ದಿನಪೂರ್ತಿ ಕಳೆದ ವಿದ್ಯಾರ್ಥಿಗಳು ತಾವು ಮನೆಯಿಂದ ತಂದಿದ್ದ ಸುಮಾರು ಒಂದು ಕ್ವಿಂಟಾಲ್ ಅಕ್ಕಿಯನ್ನು ಸಮರ್ಪಿಸಿದರು. ಹಾಗೂ ಕನ್ಯಾನ ಪೇಟೆಯ

ಸ್ವಚ್ಛತಾ ಕಾರ್ಯ ಮಾಡಿದರು. ವಿಟ್ಲದ ಮೂರುಕಜೆಯ ಮೈತ್ರೇಯಿ ಗುರುಕುಲಕ್ಕೂ ಭೇಟಿ ನೀಡಿ ಅಲ್ಲಿನ ಶಿಕ್ಷಣ ಪದ್ಧತಿಯ ಬಗ್ಗೆ ತಿಳಿದುಕೊಂಡರು. 80 ವಿದ್ಯಾರ್ಥಿಗಳಿದ್ದ ಈ ತಂಡಕ್ಕೆ ಸಂಘದ ನಿರ್ದೇಶಕಿ ಶಶಿಕಲಾ ಉಪನ್ಯಾಸಕಿಯರಾದ ವಿಲಾಸಿನಿ ಹಾಗೂ ಶುಭಲತಾ ನೇತೃತ್ವ ವಹಿಸಿದ್ದರು.



**ಪತ್ರಿಕೋದ್ಯಮ ಕಾರ್ಯಾಗಾರ :** 15.09.2012

ಕಾಲೇಜಿನ ಪ್ರತಿಭಾರಾಮ ಸಾಹಿತ್ಯ ಸಂಘ ಮತ್ತು ಬಂಟ್ವಾಳ ತಾಲೂಕು ಪತ್ರಕರ್ತರ ಸಂಘದ ಜಂಟಿ ಆಶ್ರಯದಲ್ಲಿ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ನಡೆದ ಪತ್ರಿಕೋದ್ಯಮ ಮಾಹಿತಿ ಕಾರ್ಯಾಗಾರವನ್ನು ಪ್ರಾಚಾರ್ಯ ಕೃಷ್ಣಪ್ರಸಾದ ಉದ್ಘಾಟಿಸಿದರು.

ಶ್ರೀರಾಮ ಪ್ರೌಢಶಾಲೆಯ ಕನ್ನಡ ಶಿಕ್ಷಕ, ಹೊಸದಿಗಂತ ವರದಿಗಾರರೂ ಆದ ಜಯಾನಂದ ಪೆರಾಜೆಯವರು ಕತೆ, ಕವನ, ಲೇಖನ ಬರಹಗಳಲ್ಲಿ ಗಮನಿಸಬೇಕಾದ ಅಂಶಗಳು ಮತ್ತು ಅದರ ಅವಶ್ಯಕತೆಗಳ ಬಗ್ಗೆ ತಿಳಿಹೇಳಿದರು. ವೇದಿಕೆಯಲ್ಲಿ ಬಂಟ್ವಾಳ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ವಿಶ್ವನಾಥ ಬಂಟ್ವಾಳ ಹಾಗೂ ಸಂಘದ ಮಹೇಶ ನೆಟ್ಲ ಪ್ರತಿಭಾರಾಮ ಸಾಹಿತ್ಯ ಉಪಸ್ಥಿತರಿದ್ದರು.

# ಪದವಿ ವಿಭಾಗ

**ಜಾನಪದ ವೈವಿಧ್ಯ :**



ದಿನಾಂಕ 01.09.2012ನೇ ಶನಿವಾರದಂದು, ಶಾರದಾ ಕಾಲೇಜು ಕೊಡಿಯಾಲ್‌ಬೈಲ್ ಇದರ ಸಭಾಂಗಣದಲ್ಲಿ ಏರ್ಪಡಿಸಿದ್ದ ಮಂಗಳೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಅಂತರ್ ಕಾಲೇಜು ಮಟ್ಟದ ಜಾನಪದ ವೈವಿಧ್ಯ ಸ್ಪರ್ಧೆ 'ಪಿಂಗಾರ 2012'ಯಲ್ಲಿ ಪದವಿ ವಿಭಾಗದ ವಿದ್ಯಾರ್ಥಿಗಳು ಭಾಗವಹಿಸಿ, ದ್ವಿತೀಯ ಬಹುಮಾನವನ್ನು ಪಡೆದು–ಕೊಂಡರು. ಒಟ್ಟು ಹದಿನೈದು ನಿಮಿಷದ ಅವಧಿಯಲ್ಲಿ ವೈವಿಧ್ಯಮಯವಾದ ಪ್ರದರ್ಶನಗಳನ್ನು ತಂಡ ನೀಡಿತು. ಸಂಸ್ಥೆಯ ಸಂಚಾಲಕರು ವಿಜೇತರನ್ನು ಅಭಿನಂದಿಸಿದರು.

**ಕಬಡ್ಡಿಯಲ್ಲಿ ಪ್ರಥಮ :**

ದಿನಾಂಕ 16.09.2012ರಂದು ಬಂಟ್ವಾಳದಲ್ಲಿ ಎಸ್.ವಿ.ಎಸ್. ಮಹಾವಿದ್ಯಾಲಯದ ಕ್ರೀಡಾಂಗಣದಲ್ಲಿ ನಡೆದ ತಾಲೂಕು ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಏರ್ಪಡಿಸಲಾಗಿದ್ದ ಕಬಡ್ಡಿ ಪಂದ್ಯಾಟದಲ್ಲಿ ಶ್ರೀರಾಮ ಪ್ರಥಮದರ್ಜೆ ಮಹಾವಿದ್ಯಾಲಯದ ಹುಡುಗರ ತಂಡ ಪ್ರಥಮ ಸ್ಥಾನ ಪಡೆದುಕೊಂಡಿದೆ.

# ವಿದ್ಯಾಕೇಂದ್ರ

**ವಿವೇಕಾನಂದ ಸಾರ್ಧಶತಿ(150) ಕಾರ್ಯಕ್ರಮ ಸಿದ್ಧತಾ ಬೈಠಕ್**

ವಿವೇಕಾನಂದ ಸಾರ್ಧಶತಿ ವರ್ಷಾಚರಣೆ, ವಿವೇಕಾನಂದ ವಿದ್ಯಾವರ್ಧಕ ಸಂಘದ ಶತಮಾನೋತ್ಸವ ಮತ್ತು ವಿವೇಕಾನಂದ ಕಾಲೇಜಿನ ಸುವರ್ಣ ಮಹೋತ್ಸವದ ಹಿನ್ನಲೆಯಲ್ಲಿ ಶ್ರೀರಾಮ ವಿದ್ಯಾಕೇಂದ್ರದ ಆಡಳಿತ ಮಂಡಳಿ, ಶಾಲಾಭಿವೃದ್ಧಿ ಸಮಿತಿ ಹಾಗೂ ವಿವಿಧ ವಿಭಾಗಗಳ ಶಿಕ್ಷಕ – ಶಿಕ್ಷಕೇತರರ ಸಭೆಯಲ್ಲಿ ಚರ್ಚಿಸಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವರೆ ನಿರ್ಣಯಿಸಲಾಯಿತು.

| ವಿಭಾಗ | ಯೋಜಿತ ಕಾರ್ಯಕ್ರಮಗಳು | ವಿಭಾಗ | ಯೋಜಿತ ಕಾರ್ಯಕ್ರಮಗಳು |
|---|---|---|---|
| ಶಿಶುಮಂದಿರ : | 1. ಮಾತೃ ಸಮಾವೇಶ<br>2. ಕೈತುತ್ತು ಕಾರ್ಯಕ್ರಮ<br>3. ಸಾಂಸ್ಕೃತಿಕ ಕಾರ್ಯಕ್ರಮ<br>4. ಶಿಶುಗಳಿಗೆ, ಪೋಷಕರಿಗೆ ಸ್ಪರ್ಧೆಗಳು<br>5. ಸೇವಾ ಬಸ್ತಿ ಸಂಪರ್ಕ – ಸಂಸ್ಕಾರ | ಪದವಿಪೂರ್ವ | 1. ರಕ್ತದಾನ ಶಿಬಿರ<br>2. ಮ್ಯಾರಥಾನ್<br>3. ಸಾಂಸ್ಕೃತಿಕ ಸ್ಪರ್ಧೆಗಳು<br>4. ಸಂವೇದನಾಶೀಲ ಪ್ರದೇಶದ ಜನರ ಭೇಟಿ ಸಂದರ್ಶನ<br>5. ಬೀದಿನಾಟಕಗಳು |
| ಪ್ರಾಥಮಿಕ ಶಾಲೆ | 1. ಮನೆಮನೆಗೆ ವಿವೇಕಾನಂದರ ಭಾವಚಿತ್ರ ಸಹಿತ ಸಂದೇಶ<br>2. ವಿವಿಧ ಗ್ರಾಮಗಳಲ್ಲಿ ಉಚಿತ ವೈದ್ಯಕೀಯ ಶಿಬಿರಗಳು<br>3. ವಿದ್ಯಾರ್ಥಿಗಳಿಗೆ ಸಮಾಜದ ವಿವಿಧ ವ್ಯವಸಾಯ ಕ್ಷೇತ್ರಗಳ ಪರಿಚಯ<br>4. ಬಾಲಸಂಗಮ<br>5. ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ, ಪೋಷಕರಿಗೆ ಸ್ಪರ್ಧೆಗಳು | ಪದವಿ ವಿಭಾಗ | 1. ವಿಶ್ವವಿದ್ಯಾಲಯ ಮಟ್ಟದಲ್ಲಿ ವಿಚಾರ ಸಂಕಿರಣ<br>2. ಜಾಗೋ ಭಾರತ್ ಮಾದರಿಯ ಜನಜಾಗೃತಿ ಕಾರ್ಯಕ್ರಮ<br>3. ವಿವಿಧ ಬೌದ್ಧಿಕ, ಸಾಂಸ್ಕೃತಿಕ ಸ್ಪರ್ಧೆಗಳು<br>4. ಗ್ರಾಮ ನೈರ್ಮಲ್ಯ<br>5. ಕನ್ಯಾಕುಮಾರಿ ವಿವೇಕಾನಂದ ಕೇಂದ್ರಕ್ಕೆ ಪ್ರವಾಸ |
| ಪ್ರೌಢಶಾಲೆ | 1. ಶಿಕ್ಷಕರ ವಿಚಾರಸಂಕಿರಣ<br>2. ಬಂಟ್ವಾಳ ತಾಲೂಕಿನ ವಿವಿಧ ಕಡೆ ಬಾಲಗೋಕುಲಗಳು<br>3. ಕೃಷಿ ಹಾಗೂ ಇತರ ವೃತ್ತಿಪರರ ಸಮಾವೇಶಗಳು<br>4. ವಿವಿಧ ಸ್ಪರ್ಧೆಗಳು<br>5. ಹಿರಿಯ ವಿದ್ಯಾರ್ಥಿಗಳ ಸಮಾವೇಶ | ವಿದ್ಯಾಕೇಂದ್ರದ ಎಲ್ಲಾ ಸಂಸ್ಥೆಗಳು ಸೇರಿ ನಡೆಸುವ ಕಾರ್ಯಕ್ರಮಗಳು | 1. ಗ್ರಾಮ ವಿಕಾಸ<br>2. ಸಾಹಿತ್ಯ ಸಮ್ಮೇಳನ<br>3. ಶಿಶು ಮಂದಿರಗಳನ್ನು ಪ್ರಾರಂಭಿಸುವುದು<br>4. ಯುವಕ, ಯುವತಿಯರ ತರಬೇತಿ, ಸೇವಾದೀಕ್ಷೆ<br>5. ವೃಕ್ಷಾರೋಪಣ, ಜಲಸಂರಕ್ಷಣೆ |

# ಸುದರ್ಶನ್‌ಜೀಯವರಿಗೆ ಶ್ರದ್ಧಾಂಜಲಿ



ಸುದರ್ಶನ್‌ಜೀಯವರ ಪೂರ್ಣ ಹೆಸರು ಕುಪ್ಪಹಳ್ಳಿ ಸೀತಾರಾಮಯ್ಯ ಸುದರ್ಶನ್. ಕುಪ್ಪಹಳ್ಳಿ ಮಂಡ್ಯದ ಸಮೀಪದ ಒಂದು ಗ್ರಾಮ. ಸುದರ್ಶನ್‌ಜೀಯವರ ಹಿರಿಯರು ಕರ್ನಾಟಕದವರು. 1931ರ ಮಾರ್ಚ್ 18ರಂದು ಆಗಿನ ಮಧ್ಯಪ್ರದೇಶ ಪ್ರಾಂತದ ರಾಯ್‌ಪುರದಲ್ಲಿ ಜನನ. 9ನೇ ವಯಸ್ಸಿನಿಂದ ಸಂಘದ ಶಾಖೆಗೆ ಬರಲು ಪ್ರಾರಂಭ. ಟೆಲಿಕಮ್ಯೂನಿಕೇಶನ್ ತಂತ್ರಜ್ಞಾನದ ವಿಷಯದಲ್ಲಿ ಸಾಗರ್ ವಿಶ್ವವಿದ್ಯಾಲಯದಿಂದ ಬಿ. ಎ. (ಆನರ್ಸ್) ಪದವೀಧರ. 1954ರಿಂದ ಸಂಘದ ಪ್ರಚಾರಕರು. ರಾಯಗಢ ಜಿಲ್ಲೆಯಲ್ಲಿ ಸಂಘದ ಪ್ರಚಾರಕರಾಗಿ ಕಾರ್ಯಾರಂಭ. 1964ರಲ್ಲಿ 33 ವರ್ಷ ವಯಸ್ಸಿನಲ್ಲಿ ಮಧ್ಯಭಾರತ ಪ್ರಾಂತಪ್ರಚಾರಕರಾಗಿ ಜವಾಬ್ದಾರಿ. 1969ರಿಂದ ವಿವಿಧ ಕ್ಷೇತ್ರಗಳ ಅಖಿಲಭಾರತೀಯ ಸಮನ್ವಯಕಾರ / ಪ್ರಭಾರಿಯಾಗಿ ಜವಾಬ್ದಾರಿ ನಿರ್ವಹಿದರು. 1977ರಿಂದ ಪೂರ್ವಾಂಚಲದ ರಾಜ್ಯಗಳಲ್ಲೂ ಎರಡು ವರ್ಷಗಳ ಕಾಲ ಸಂಘಕಾರ್ಯ ವಿಸ್ತಾರಕ್ಕಾಗಿ ಕೆಲಸ ಮಾಡಿರುವ ಅನುಭವಿ. 1979ರಲ್ಲಿ ಅಖಿಲಭಾರತೀಯ ಶಾರೀರಿಕ ಪ್ರಮುಖರಾಗಿ ಜವಾಬ್ದಾರಿ. ತದನಂತರ ಅಖಿಲಭಾರತೀಯ ಬೌದ್ಧಿಕ್ ಪ್ರಮುಖರಾಗಿಯೂ ಮಾರ್ಗದರ್ಶನ ಮಾಡಿದ್ದಾರೆ. ಅಖಿಲಭಾರತೀಯ ಸ್ತರದಲ್ಲಿ ಶಾರೀರಿಕ ಪ್ರಮುಖ ಮತ್ತು ಬೌದ್ಧಿಕ್ ಪ್ರಮುಖ ಜವಾಬ್ದಾರಿಗಳೆರಡನ್ನೂ ಸಮರ್ಥವಾಗಿ ನಿರ್ವಹಿಸಿದ ಅಪರೂಪದ ಬಹುಮುಖೀ ವ್ಯಕ್ತಿತ್ವ ಸುದರ್ಶನ್‌ಜೀಯವರದ್ದು. 1990ರಲ್ಲಿ ಸಂಘದ ಸಹ ಸರಕಾರ್ಯವಾಹರಾಗಿ ಜವಾಬ್ದಾರಿ. 2000ನೇ ಇಸವಿ ಮಾರ್ಚ್ 10ರಂದು ರಜ್ಜೂ ಭೈಯ್ಯಾ ಅವರಿಂದ ಸರಸಂಘಚಾಲಕರಾಗಿ ಜವಾಬ್ದಾರಿ ವಹಿಸಿಕೊಂಡರು. ಅನಾರೋಗ್ಯದ ಕಾರಣದಿಂದ 2009ನೇ ಇಸವಿ ಮಾರ್ಚ್ 21ರಂದು ಸರಸಂಘಚಾಲಕಸ್ಥಾನದಿಂದ ಸ್ವಯಂ ನಿವೃತ್ತರಾಗಿ, ಪ. ಪೂ. ಡಾ। ಮೋಹನ್‌ಜೀ ಭಾಗವತ್ ಅವರಿಗೆ ಸರಸಂಘಚಾಲಕ ಜವಾಬ್ದಾರಿ ವಹಿಸಿಕೊಟ್ಟರು. ಸಂಘಟನೆಗಳಲ್ಲಿ ಯುವಕರಿಗೆ ನಾಯಕತ್ವ ಕೊಡಬೇಕು, ಹಿರಿಯರು ಹಿಂದಿನಿಂದ ಅವರಿಗೆ ಮಾರ್ಗದರ್ಶನ ಮಾಡಬೇಕು ಎಂಬ ವ್ಯಾವಹಾರಿಕ ಸಂಗತಿಯನ್ನು ತಮ್ಮ ಸ್ವಂತ ಮೇಲ್ಪಂಕ್ತಿಯಿಂದ ತೋರಿಸಿಕೊಟ್ಟರು.

ಸುದರ್ಶನ್‌ಜಿಯವರದ್ದು ತೀಕ್ಷ್ಣ ಬುದ್ಧಿ, ವಿವಿಧ ವಿಷಯಗಳಲ್ಲಿ ಆಳವಾದ ಅಧ್ಯಯನ, ಪಾಂಡಿತ್ಯ, ಅತ್ಯಂತ ತಾರ್ಕಿಕ ವಿಷಯ ಮಂಡನೆ, ಮಾತಿನಲ್ಲಿ ಹಾಸ್ಯಪ್ರಜ್ಞೆ; ಈ ಕಾರಣಗಳಿಂದ ಅವರ ಬೌದ್ಧಿಕ್, ಸಾರ್ವಜನಿಕ ಭಾಷಣ, ಪತ್ರಿಕಾ ಸಂದರ್ಶನಗಳೆಲ್ಲ ಅತ್ಯಂತ ಬೋಧಪ್ರದ, ಸಮಾಜಕ್ಕೆ ಸೂಕ್ತ ಮಾರ್ಗದರ್ಶನ. ಸ್ವದೇಶೀ ವಿಚಾರದ ಅತ್ಯಂತ ಪ್ರಬಲ ಪ್ರತಿಪಾದಕರಾಗಿದ್ದರು. ಹಿಂದುತ್ವ, ಸಾಂಸ್ಕೃತಿಕ ಮೌಲ್ಯಗಳು, ಸಾಮಾಜಿಕತೆ, ರಾಷ್ಟ್ರೀಯತೆ, ಸಾಮಯಿಕ ಸಮಸ್ಯೆಗಳಿಗೆ ಸಂಘಕಾರ್ಯದಿಂದ ಪರಿಹಾರ ಹೇಗೆ ಸಾಧ್ಯ ಎಂಬಿತ್ಯಾದಿ ವಿಷಯಗಳ ಬಗ್ಗೆ ಪಾಂಡಿತ್ಯಪೂರ್ಣವಾಗಿ, ತರ್ಕಬದ್ಧವಾಗಿ ಮನಮುಟ್ಟುವಂತೆ ಮಾತನಾಡುವ ಪ್ರತಿಭೆ ಸಾಧನೆ ಅವರಲ್ಲಿತ್ತು. ಮುಸ್ಲಿಂ ಮತ್ತು ಕ್ರಿಶ್ಚಿಯನ್ ಬಂಧುಗಳಲ್ಲೂ ರಾಷ್ಟ್ರೀಯ ಭಾವ ಬೆಳೆಸಿ ಅವರನ್ನೂ ನಮ್ಮ ಸಾಂಸ್ಕೃತಿಕ ಧಾರೆಯಲ್ಲಿ ಸಮರಸಗೊಳಿಸುವ ಪ್ರಯತ್ನವನ್ನು ಮಾಡಲು ಮುನ್ನುಡಿ ಹಾಕಿಕೊಟ್ಟಿದ್ದಾರೆ. ಅತ್ಯಂತ ಸರಳ ಜೀವನ, ವಿನಯಪೂರ್ವಕ ನಡನಳಿಕೆ. ಸರಸಂಘಚಾಲಕ ಸ್ಥಾನದಿಂದ ನಿವೃತ್ತಿಯ ನಂತರ ತಾನೊಬ್ಬ ಸಾಮಾನ್ಯ ಸ್ವಯಂಸೇವಕ ಎಂಬುದನ್ನು ವ್ಯವಹಾರದಲ್ಲಿ ನಡೆದು ತೋರಿದವರು. ಕಾರ್ಯಕ್ರಮಗಳಲ್ಲಿ ಉಳಿದೆಲ್ಲ ಸ್ವಯಂಸೇವಕರಂತೆ ನೆಲದಲ್ಲೇ ಕುಳಿತು ಭಾಗವಹಿಸುತ್ತಿದ್ದರು. ಅನಾರೋಗ್ಯದ ನಡುವೆಯೂ ಸಂಘದ ಅಪೇಕ್ಷೆಯಂತೆ ಎಲ್ಲ ಕೆಲಸಗಳನ್ನು ಯಶಸ್ವಿಯಾಗಿ ನಿರ್ವಹಿಸಿದರು.

ಸುದರ್ಶನ್‌ಜಿಯವರದ್ದು ರಾಷ್ಟ್ರ ಸಮರ್ಪಿತ ಜೀವನ. 1954ರಿಂದ ಕೊನೆಯ ಉಸಿರಿನವರೆಗೆ 58ವರ್ಷಗಳ ಕಾಲ ತನ್ನೆಲ್ಲ ಪ್ರತಿಭೆ ಪರಿಶ್ರಮಗಳನ್ನೂ ಸಂಘಕಾರ್ಯಕ್ಕೆ ಸಮರ್ಪಿಸಿ ತಾಯಿ ಭಾರತಿಯ ಸೇವೆಗೈದ ಸಾರ್ಥಕ ಚೇತನ. ಅವರ ಜೀವನ ನಮಗೆ ಪ್ರೇರಣಾ ಸ್ರೋತ. ಅವರ ದಾರಿಯಲ್ಲೇ ನಡೆದು, ಸಂಘದ ಧ್ಯೇಯೋದ್ದೇಶಗಳನ್ನು ಸಾಧಿಸಲು ಇನ್ನೂ ಹೆಚ್ಚಿನ ಪರಿಶ್ರಮವಹಿಸಿ ಕೆಲಸ ಮಾಡುವುದೇ ಅವರಿಗೆ ನಾವು ಸಲ್ಲಿಸಬೇಕಾದ ಕಾರ್ಯಾಂಜಲಿ, ಅದುವೇ ನಿಜವಾದ ಶ್ರದ್ಧಾಂಜಲಿ.

ಶ್ರೀರಾಮ ವಿದ್ಯಾಕೇಂದ್ರದ ಎಲ್ಲಾ ವಿಭಾಗಗಳಲ್ಲೂ ಪೂಜ್ಯ ಶ್ರೀ ಸುದರ್ಶನ್‌ಜೀಯವರ ಜೀವನ ಸಾಧನೆಗಳನ್ನು ಸ್ಮರಿಸಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

## ಚಿತ್ರ ನೋಡಿ ಶೀರ್ಷಿಕೆ ನೀಡಿ



ಹಿಂದಿನ ಸಂಚಿಕೆಯ ಚಿತ್ರಕ್ಕೆ ಆಯ್ಕೆಯಾದ ಶೀರ್ಷಿಕೆಗಳು :

**ದುಡುಕದೆ ನಡೆ ನೀ ಜೋಪಾನ** – ಅನಾಮಿಕ

**ಕಾಲಿನ ಝುಣ ಝುಣ ಗೆಜ್ಜೆ ಹಾಕಿದೆ ನದಿಯಲಿ ಹೆಜ್ಜೆ**

–**ಚೈತ್ರ ಅಡಿಗ** 10 ಆಜಾದ್

**ನೀರಾಟ ಓಕೆ ಹಾರಾಟ ಜೋಕೆ**

**ಅಕ್ಷತಾ ಕೆ.** ಪ್ರಥಮ ಪಿ.ಯು. ವಾಣಿಜ್ಯ

**ಶುರುವಾಯ್ತು ಶಾಲಾ ರಜಾ ದಿನ ಮುಗಿಯದು ಮಜಾ ಅನುದಿನ**

– **ಚೈತ್ರ** 9ಚೆನ್ನಮ್ಮ

**ಮಳೆ ಬಂತು ಮಳೆ ತುಂಬಿತೆಲ್ಲ ಹೊಳೆ** –

–**ಸಂಪತ್ ಕುಮಾರ್** 10ದುರ್ಗಾವತಿ

**ನೀರಮೇಲೆ ಸಾಗಿದೆ ಬದುಕ ಪಯಣ ತಲಪಬಹುದೇ ಸುಂದರ ತಾಣ**

–**ಪ್ರಶಾಂತ್** ಶಿಕ್ಷಕ ಪ್ರೌಢಶಾಲೆ



ಈ ಚಿತ್ರಕ್ಕೆ ಶೀರ್ಷಿಕೆಯನ್ನು ಕಳುಹಿಸಿಕೊಡಿ.
ವಿದ್ಯಾರ್ಥಿಗಳು ಆಯಾ ವಿಭಾಗದಲ್ಲಿ ಇಟ್ಟಿರುವ ಸರಯೂ ಪೆಟ್ಟಿಗೆಯಲ್ಲಿ ಉತ್ತರಗಳನ್ನು ಬರೆದುಹಾಕಿ.

# 12ನೇ ನವದಂಪತಿ ಸಮಾವೇಶ 23–09–2012 ಭಾನುವಾರ









ಶ್ರೀರಾಮ ವಿದ್ಯಾಕೇಂದ್ರದ ವಿಶೇಷ ಕಾರ್ಯಕ್ರಮಗಳಲ್ಲೊಂದಾದ ನವದಂಪತಿ ಸಮಾವೇಶವು ವೇದವ್ಯಾಸ ಮಂಟಪದಲ್ಲಿ ನಡೆಯಿತು. ಕಳೆದ ಒಂದು ವರ್ಷದಲ್ಲಿ ನವದಾಂಪತ್ಯಕ್ಕೆ ಕಾಲಿರಿಸಿದ ದಂಪತಿಗಳಿಗೆ ತಮ್ಮ ಕುಟುಂಬ ಜೀವನ ಹಾಗೂ ಸಮಾಜ ಜೀವನ ಇದೆರಡನ್ನೂ ಜೊತೆಯಾಗಿ ಸುಂದರವಾಗಿ ನಡೆಸಲು ಬೇಕಾದ ಬಾಳಬುತ್ತಿಯನ್ನು ಕಟ್ಟಿಕೊಡುವ ಈ ಕಾರ್ಯಕ್ರಮವನ್ನು ಶ್ರೀರಾಮ ವಿದ್ಯಾಕೇಂದ್ರ ಕಳೆದ 12 ವರ್ಷಗಳಿಂದ ನಡೆಸುತ್ತಾ ಬಂದಿದೆ.

ಕಾರ್ಯಕ್ರಮದಲ್ಲಿ ಕುಟುಂಬ ಪ್ರಬೋಧನ್‌ನ ಅಖಿಲ ಭಾರತ ಪ್ರಮುಖರಾದ ಶ್ರೀ.ಸು.ರಾಮಣ್ಣನವರು ಉಪಸ್ಥಿತರಿದ್ದು ಮಾರ್ಗದರ್ಶನ ಮಾಡಿದರು. ಉದ್ಘಾಟನಾ ಅವಧಿ ಹಾಗೂ ಸಮಾರೋಪದ ಅವಧಿಯನ್ನು ಬಹಳ ಅರ್ಥಪೂರ್ಣವಾಗಿ ನಡೆಸಿಕೊಟ್ಟರು. ಹಿಂದು ಮನೆಯೊಳಗಿನ ಆಚರಣೆಯಿಂದ ಹಿಡಿದು ಆ ಮನೆ ಇಡೀ ಸಮಾಜದ ಮನೆಯಾಗುವಷ್ಟರ ಮಟ್ಟಿಗೆ ಬೆಳೆಯಬೇಕಾದರೆ ಪರಸ್ಪರ ಕುಟುಂಬದ ಸದಸ್ಯರಲ್ಲಿರಬೇಕಾದ ಸಹಕಾರ ನಂಬಿಕೆ, ಪ್ರೀತಿ, ವಿಶ್ವಾಸ, ರಕ್ಷಣೆಯ ಭಾವ ಇವೆಲ್ಲವನ್ನೂ ಪರಿಣಾಮಕಾರಿಯಾಗಿ ತಿಳಿಸಿಕೊಟ್ಟರು. ಆಗಮಿಸಿದ ಎಲ್ಲಾ ನವದಂಪತಿಗಳನ್ನು ಕಾಲು ತೊಳೆದು, ಆರತಿ ಎತ್ತಿ, ತಿಲಕವಿಟ್ಟು, ಹೂವು ನೀಡಿ ವೇದ ಘೋಷದೊಂದಿಗೆ ಬರಮಾಡಿಕೊಳ್ಳಲಾಯಿತು. ಪರಸ್ಪರ ಪರಿಚಯ, ಸಂವಾದ, ಪ್ರಶ್ನೋತ್ತರ, ಅನಿಸಿಕೆ ಇವೆಲ್ಲಕ್ಕೂ ಕಾರ್ಯಕ್ರಮದಲ್ಲಿ ಮುಕ್ತ ಅವಕಾಶವಿತ್ತು.

ಹಿರಿಯ ದಂಪತಿಗಳಾಗಿ ಆಗಮಿಸಿದ ನಗ್ರಿಗುತ್ತು ಶ್ರೀ ವಿಠಲ ಶೆಟ್ಟಿ ಹಾಗೂ ಶ್ರೀಮತಿ ಚಂದ್ರಾವತಿ.ವಿ.ಶೆಟ್ಟಿಯವರು ತಮ್ಮ ದಾಂಪತ್ಯ ಜೀವನದ ಅನುಭವಗಳಿಂದ ನವದಂಪತಿಗಳಿಗೆ ಶುಭಹಾರೈಸಿದರು. ವಿದ್ಯಾಕೇಂದ್ರದ ಸಂಚಾಲಕರು ಪ್ರಸ್ತಾವನಾ ರೂಪದಲ್ಲಿ ಕಾರ್ಯಕ್ರಮದ ಉದ್ದೇಶವನ್ನು ತಿಳಿಸಿದರು.

ಸಂಸ್ಥೆಯ ಅಧ್ಯಕ್ಷ ಶ್ರೀ ನಾರಾಯಣ ಸೋಮಯಾಜಿ, ಡಾ। ಕಮಲಾ ಪ್ರಭಾಕರ ಭಟ್ ಉಪಸ್ಥಿತರಿದ್ದು ಮಾರ್ಗದರ್ಶನ ಮಾಡಿದರು. ವಿಶಿಷ್ಟ ರೀತಿಯಲ್ಲಿ ಇಡೀ ಸಭಾಂಗಣ ಹಾಗೂ ವೇದಿಕೆಯನ್ನು ಅಲಂಕರಿಸಲಾಗಿತ್ತು. ಸುಮಾರು 60ಕ್ಕೂ ಹೆಚ್ಚು ಊರಿನ ತಾಯಂದಿರು ಈ ಕಾರ್ಯಕ್ರಮಕ್ಕಾಗಿ ಎಲ್ಲಾ ವ್ಯವಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡುದು ಅನೇಕರ ಮೆಚ್ಚುಗೆಗೆ ಪಾತ್ರವಾಯಿತು.

ಒಟ್ಟು 105 ಜೋಡಿ ಭಾಗವಹಿಸಿದ ಈ ಕಾರ್ಯಕ್ರಮದಲ್ಲಿ ಕು.ದಿವ್ಯಾ ಪ್ರಾರ್ಥಿಸಿ, ಶ್ರೀಮತಿ ಸೀಮಾ ಭಟ್ ಸ್ವಾಗತಿಸಿ, ಶ್ರೀಮತಿ ಶೋಭಲತಾ ವಂದಿಸಿದರು. ಶ್ರೀಮತಿ ಆಶಾ ಪ್ರಸಾದ್ ನಿರೂಪಿಸಿದರು. ಶ್ರೀಮತಿ ಸಂಗೀತಾ ಮತ್ತು ಶ್ರೀ ಸೂರ್ಯ ಭಟ್ ಕ್ರೋಢೀಕೃತ ವರದಿ ಮಂಡಿಸಿದರು.

"ಸರಯೂ" ಪತ್ರಿಕೆಯ ಬಗೆಗೆ ಹಾಗೂ ವಿದ್ಯಾಕೇಂದ್ರದ ಕಾರ್ಯಚಟುವಟಿಕೆಗಳ ಬಗ್ಗೆ ನಿಮ್ಮ ಅಭಿಪ್ರಾಯಗಳಿಗೆ ಸ್ವಾಗತ. ಈ ಪತ್ರಿಕೆಯ ಪೋಷಕರಾಗಬಯಸುವವರು ರೂ. 1000/–ದ ಡಿ.ಡಿ./ಚೆಕ್‌ನ್ನು ಶ್ರೀರಾಮ ವಿದ್ಯಾಕೇಂದ್ರ ಟ್ರಸ್ಟ್ ಹೆಸರಿನಲ್ಲಿ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.

**ಸಂಪಾದಕರು, ಸರಯೂ**
ಶ್ರೀರಾಮ ವಿದ್ಯಾಕೇಂದ್ರ, ಹನುಮಾನ್ ನಗರ, ಕಲ್ಲಡ್ಕ, ದ.ಕ.–574 222.

ಸವಿಧೇ | ತೆರೆದ ಅಂಚೆ

..............................................................

..............................................................

..............................................................